ಎಂ ವಿ ಸಿ ನಂ.2290/2023
ಪಿ.ಡಬ್ಲ್ಯು- 1

ದಿನಾಂಕಃ 22-02-2025 ರಂದು ಸಾಕ್ಷಿಗೆ ಪ್ರಮಾಣ ವಚನ ಭೋದಿಸಲಾಯಿತು.

ಮುಖ್ಯ ವಿಚಾರಣೆಃ ಅರ್ಜಿದಾರರ ಪರ ಶ್ರೀ. ಎನ್ ಬಿ ಯು ವಕೀಲರಿಂದ.

ನಾನು ನನ್ನ ಮುಖ್ಯ ವಿಚಾರಣೆಯ ಭಾಗಾಂಶವಾಗಿ ಸಾಕ್ಷ್ಯ ಪ್ರಮಾಣ ಪತ್ರ ಸಲ್ಲಿಸಿರುತ್ತೇನೆ. ಅದರಲ್ಲಿ ಬರೆದಿರುವ ಸಂಗತಿಗಳು ಸರಿಯಾಗಿರುತ್ತವೆ.

ಹಾವೇರಿ ಸಂಚಾರಿ ಪೊಲೀಸ ಠಾಣೆಯ ಅಪರಾಧ ಸಂಖ್ಯೆಃ 40/2023 ರ ಪ್ರಥಮ ವರ್ತಮಾನ ವರದಿ ಹಾಗೂ ದೂರಿನ ದೃಢೀಕೃತ ನಕಲುಗಳನ್ನು ಹಾಜರುಪಡಿಸಿರುತ್ತೇನೆ ಅವುಗಳನ್ನು ಕ್ರಮವಾಗಿ ನಿಪಿ-1 ಮತ್ತು ನಿಪಿ-2 ಎಂದು, ಗುರುತಿಸಲಾಯಿತು. ಸದರಿ ಅಪರಾಧ ಸಂಖ್ಯೆಯ ಘಟನಾ ಸ್ಥಳದ ಪಂಚನಾಮೆ, ಸ್ಥಳ ನಕ್ಷೆ, ವಾಹನ ಜಪ್ತಿ ಪಂಚನಾಮೆ, ಮೋಟಾರು ವಾಹನ ಅಪಘಾತ ಪರೀಕ್ಷಾ ವರದಿ, ಶವದ ಪಂಚನಾಮೆ, ಭಾವಚಿತ್ರ, ಶವ ಪರೀಕ್ಷಾ ವರದಿ, ದೋಷಾರೋಪಣೆ ಪಟ್ಟಿ ಇವುಗಳ ದೃಢೀಕೃತ ನಕಲುಗಳನ್ನು ಹಾಜರುಪಡಿಸಿರುತ್ತೇನೆ ಅವುಗಳನ್ನು ಕ್ರಮವಾಗಿ ನಿಪಿ-3 ರಿಂದ ನಿಪಿ-10 ಎಂದು ಗುರುತಿಸಲಾಯಿತು. ನನ್ನ ಅಕ್ಕ ಜಯಲಕ್ಷ್ಮೀ, ನನ್ನ ತಮ್ಮ ಕಿರಣ, ಚೇತನ, ನನ್ನ ತಾಯಿ ರೇಣುಕಾ ಹಾಗೂ ನನ್ನ ಆಧಾರ ಕಾರ್ಡಗಳನ್ನು ಹಾಜರುಪಡಿಸಿರುತ್ತೇನೆ ಅವುಗಳನ್ನು ಕ್ರಮವಾಗಿ ನಿಪಿ-11 ರಿಂದ ನಿಪಿ-15 ಎಂದು ಗುರುತಿಸಲಾಯಿತು. ಕುಟುಂಬ ಪಡಿತರ ಚೀಟಿಯನ್ನು ಹಾಜರುಪಡಿಸಿರುತ್ತೇನೆ ಅದನ್ನು ನಿಪಿ-16 ಎಂದು ಗುರುತಿಸಲಾಯಿತು. ಸಾಕ್ಷಿ ಮೂಲ ದಾಖಲೆಗಳನ್ನು ಈ ದಿವಸ ಹಾಜರುಪಡಿಸಿದ್ದು ಪರಿಶೀಲಿಸಿ ಸಾಕ್ಷಿಗೆ ಮರಳಿ ನೀಡಲಾಯಿತು. ಕೆಎಸ್ಆರ್‌ಟಿಸಿ ಬಸ್ಸ ನಂ.ಕೆಎ-27 ಎಫ್-0620 ಇದರ ಆರ್ ಸಿ, ಬಸ್ಸಿನ ಚಾಲಕನ ವಾಹನ ಚಾಲನಾ ಪರವಾನಿಗೆ ಪತ್ರ, ಫಿಟ್‌ನೆಸ್ ಸರ್ಟಿಫಿಕೇಟ್ ಹಾಜರುಪಡಿಸಿರುತ್ತೇನೆ.

ಆದ್ದರಿಂದ ನಾನು ಕೋರಲಾದಂತೆ ಅರ್ಜಿಯನ್ನು ಖರ್ಚು ಸಹಿತ ಮಂಜೂರು ಮಾಡಲು ಪ್ರಾರ್ಥಿಸುತ್ತೇನೆ.

ಪಾಟೀ ಸವಾಲುಃ- ಎದುರುದಾರರ ಪರ ಶ್ರೀ. ಎಸ್ ಜಿ ಟಿ ವಕೀಲರಿಂದ.

ಹಾಜರು ಇರುವುದಿಲ್ಲ, ಪಾಟೀ ಸವಾಲಿಗೆ ಅಂತಿಮ ಮುದ್ದತ್ತು ನೀಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ನನ್ನ ಸಮಕ್ಷಮ ನನ್ನ ಉಕ್ತ ಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು).

ಓ.ಹೆ.ಕೆ.ಸರಿ.ಇದೆ.

ಹಿರಿಯ ದಿವಾಣಿ ನ್ಯಾಯಾಧೀಶರು ಮತ್ತು
ಜೆ ಎಮ್ ಎಫ್ ಸಿ, ಶಿಗ್ಗಾಂವ.
(ಸ್ಥಳಃ ಸವಣೂರ).